# ಬಿಟ್ಟಿರಲಾರದ ಒಲವಿಗೆ

ಎಷ್ಟು ಪ್ರೀತಿ ನಿನಗೆ
ಅರ್ಧಾಂಗಿಯ ಮೇಲೆ
ಅರೆಕ್ಷಣವೂ ಬಿಡದ
ಅರ್ಧನಾರೀಶ್ವರ ಲೀಲೆ!

ಪಾತ್ರ ಧರಿಸಿದರೇನು
ಹೊತ್ತು ತಿರುಗಿಲ್ಲವೇನು
ಒಲವಿನ ಜೀವಕ್ಕೆ
ಉಸಿರು ತುಂಬಿಲ್ಲವೇನು!

ದಕ್ಷನ ಯಜ್ಞಕುಂಡ
ಕೆರಳಿಸಿತ್ತಲ್ಲ ಕೋಪ
ರೌದ್ರ ನರ್ತನದಿಂದ
ಪ್ರಜ್ವಲಿತವಾಯಿತೇ ಪ್ರತಾಪ!

ಕಂಡಲ್ಲಿ ಕೈಮುಗಿವ
ಭಕ್ತಗಣವನು ಹರಸು
ಒಲಿದಿರುವ ಪಾರ್ವತಿಗೆ
ಪ್ರೇಮಸುಧಾರಸ ಹರಿಸು!

ನಮಿಸುವೆನು ದೇವ
ನಿನ್ನಯ ಹೆಂಗರುಳಿಗೆ
ಬಿಟ್ಟಿರಲಾರದ ಒಲವಿನ
ಶಿವ–ಶಿವೆಯ ರೂಹಿಗೆ!

**● ಬೇದ್ರೆ ಮಂಜುನಾಥ**



# ಶಿವನ ಯಾತನೆ

ವೇಷಧರಿಸಿ ಹರನಂತೆ
ಬೊಂಬೆಯ ಹೊತ್ತು ದಾಕ್ಷಾಯಿಣಿಯಂತೆ
ಬಿಚ್ಚಿಡುತಿಹನು ಜನರೆದುರು ವೇಷಧಾರಿ
ಶಿವನ ದುಃಖಗಳ ಕಂತೆ

ಕರೆಯದೆ ದಕ್ಷನ ಯಜ್ಞಕೆ ಹೋಗಿ
ತಂದೆಯ ನಡೆಗೆ ಕ್ರೋಧಿತಳಾಗಿ
ಪ್ರಾಣತೆತ್ತಳು ಜ್ವಾಲೆಗೆ ಆಹುತಿಯಾಗಿ
ಸಂಕಟ ನಿರಾಶೆ ತುಂಬಿಹುದು
ಶಿವನಲಿ ಕೋಪ ಕ್ರೋಧದ ಜೊತೆಗೆ
ತಿರುಗುತಿಹನು ಮೂರು ಹೊತ್ತು
ಮಡದಿಯ ಸುಟ್ಟ ದೇಹದೊಟ್ಟಿಗೆ

ನೀರು ತುಂಬಿದ ಕಣ್ಣುಗಳಲಿ
ನೆನೆಯುತ ನಲ್ಲೆಯ ರೂಪವನು
ನಡೆಯುತಿಹನು ಸುಮ್ಮನೆ
ತಡೆಯಲಾಗದೆ ಯಾತನೆ

**● ಬಸವರಾಜ ಭಭ್ಬಿ**